**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆ**

**ಸಂಖ್ಯೆ**:ಮು.ಮಂ.ರೈ.ವಿ.ನಿ/ಜಂಟಿ ಸುತ್ತೋಲೆ-1/2021-22 ಬೆಂಗಳೂರು
ದಿನಾಂಕ:06/11/2021

**ಜಂಟಿ ಸುತ್ತೋಲೆ**

ವಿಷಯ:- ಮುಖ್ಯ ಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮಕ್ಕಾಗಿ ವಿದ್ಯಾರ್ಥಿಗಳ ನೋಂದಣಿ ಕುರಿತು.
ಉಲ್ಲೇಖ:- ಸರ್ಕಾರಿ ಆದೇಶ ಸಂ:Agri-AML/141/2021, ಬೆಂಗಳೂರು, ದಿನಾಂಕ:07/08/2021.

*****

ರಾಜ್ಯದ ರೈತರ ಮಕ್ಕಳಿಗೆ ಪ್ರೌಢಶಿಕ್ಷಣ ನಂತರದ ವಿದ್ಯಾಭ್ಯಾಸಕ್ಕಾಗಿ ಉಲ್ಲೇಖದ ಸರ್ಕಾರ ಆದೇಶದನ್ವಯ ಶಿಷ್ಯ ವೇತನ ಜಾರಿಗೆ ತರಲಾಗಿದೆ. ಸದರಿ ಕಾರ್ಯಕ್ರಮದಡಿ ರಾಜ್ಯದ ಇತರೇ ಶಿಷ್ಯ ವೇತನ ಕಾರ್ಯಕ್ರಮಗಳಡಿ ಶಿಷ್ಯ ವೇತನ ಪಡೆಯದಿರುವ ಎಲ್ಲಾ ರೈತ ಮಕ್ಕಳು ಅರ್ಹರಿರುತ್ತಾರೆ. ಪಿ.ಯು.ಸಿ ಯಲ್ಲಿ ನೊಂದಾಯಿಸಿರುವ ವಿದ್ಯಾರ್ಥಿಗಳಿಗೆ ಗಂಡು ಮಕ್ಕಳಿಗೆ ವಾರ್ಷಿಕ ರೂ.2500/- ಮತ್ತು ಹೆಣ್ಣು ಮಕ್ಕಳಿಗೆ ವಾರ್ಷಿಕ ರೂ.3000/- ಶಿಷ್ಯ ವೇತನ ನಿಗಧಿಪಡಿಸಲಾಗಿದೆ. ಶಿಕ್ಷಣ ವರ್ಗಕ್ಕೆ ಅನ್ವಯವಾಗುವಂತೆ ಶಿಷ್ಯ ವೇತನ ದರಗಳ ವಿವರ ಈ ಕೆಳಕಂಡಂತಿದೆ.

ವಿದ್ಯಾರ್ಥಿಗಳು ಮುಖ್ಯ ಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮದ ಶಿಷ್ಯ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (SSP Portal) ತಮ್ಮ ಹಾಗೂ ತಮ್ಮ ತಂದೆ ಹಾಗೂ ತಾಯಿಯ ಆಧಾರ್ ಸಂಖ್ಯೆಯೊಂದಿಗೆ ನೋಂದಣಿ ಮಾಡಿಕೊಳ್ಳಬೇಕಾಗಿರುತ್ತದೆ. ವಿದ್ಯಾರ್ಥಿ ವೇತನ ತಂತ್ರಾಂಶದ (SSP Portal) ವಿದ್ಯಾರ್ಥಿಗಳ ದಾಖಲೆಗಳು ಪರಿಶೀಲನೆಗೊಳಪಟ್ಟ ನಂತರ ಅರ್ಹ ವಿದ್ಯಾರ್ಥಿಗಳಿಗೆ DBT ತಂತ್ರಾಂಶದ ಮುಖಾಂತರ ವಿದ್ಯಾರ್ಥಿಗಳ ಖಾತೆಗೆ ನೇರ ನಗದು ವರ್ಗಾವಣೆಯಾಗುತ್ತದೆ.

06/11/2021

ಸದರಿ ಕಾರ್ಯಕ್ರಮ ಯಶಸ್ವಿ ಅನುಷ್ಠಾನಕ್ಕಾಗಿ ಕೃಷಿ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಕೆಳಕಂಡ ತುರ್ತು ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

1. ಮಕ್ಕಳ ದಾಖಲಾತಿ ಸಮಯದಲ್ಲಿ ಆಧಾರ್ ಸಂಖ್ಯೆಯನ್ನು ಪಡೆದು SATS Data base ನಲ್ಲಿ update ಮಾಡುವುದು.
2. ವಿದ್ಯಾರ್ಥಿಗಳ ಹೆಸರಿನಲ್ಲಿ ವೈಯುಕ್ತಿಕ ಉಳಿತಾಯ ಖಾತೆ ತೆರೆಸಿ ಆಧಾರ್ ಸಂಖ್ಯೆಗೆ ಜೋಡಣೆ ಮಾಡಿಸಿ ಸದರಿ ಖಾತೆಗೆ NPCI Mapping ಪ್ರಕ್ರಿಯೆ ಪೂರ್ಣಗೊಳಿಸಲು ಸಂಬಂಧಪಟ್ಟ ಬ್ಯಾಂಕ್ ಗಳ ಜೊತೆಗೆ ಸಮನ್ವಯ ಕ್ರಮ ಕೈಗೊಳ್ಳುವುದು.

Sd/-
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

Sd/-
ಕೃಷಿ ಆಯುಕ್ತರು
ಕೃಷಿ ಇಲಾಖೆ

ಪ್ರತಿಯನ್ನು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ,
1. ಎಲ್ಲಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರು.
2. ಎಲ್ಲಾ ಜಿಲ್ಲೆಗಳ ಪದವಿಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳು.